
# ಶೃಂಗೇರಿ ಪೀಠವನ್ನು ಕುರಿತ ಮಹತ್ವದ ಗ್ರಂಥ

ಶ್ರೀಶಂಕರರು ಸ್ಥಾಪಿಸಿದ ನಾಲ್ಕು ಪೀಠಗಳಲ್ಲಿ ಒಂದಾದ ಶೃಂಗೇರಿಯ ಶಾರದಾ ಪೀಠವನ್ನು ಕುರಿತಾದ ವಿಸ್ತತ ಮಾಹಿತಿಗಳನ್ನೊಳಗೊಂಡ ಗ್ರಂಥವೇ '**ಶೃಂಗೇರಿ ಶಾರದಾಪೀಠ ಗುರುಪರಂಪರೆ ಮತ್ತು ಸ್ಥಳ ಮಹತ್ವ**' ಎಂಬುದು. ಈ ಕೃತಿಯನ್ನು ಬರೆದವರು ಅಧ್ಯಾತ್ಮ ಚಿಂತಕರೂ, ಜ್ಯೋತಿಷಿಗಳೂ, ಬರಹಗಾರರೂ ಆಗಿರುವ ಮಂಡಗದ್ದೆ ಪ್ರಕಾಶ್ ಬಾಬು ಕೆ. ಆರ್. ಅವರು. ಈ ಕೃತಿಯನ್ನು ಲೋಕ ಶಿಕ್ಷಣ ಟ್ರಸ್ಟ್ ಪ್ರಕಾಶನವು ಪ್ರಕಟಿಸಿದ್ದು, ಈ ಗ್ರಂಥವು ಅನೇಕ ವರ್ಣಚಿತ್ರಗಳನ್ನೂ ಉಪಯುಕ್ತ ಆಕರಗಳನ್ನೂ ಒಳಗೊಂಡಿದೆ.

ಈ ಕೃತಿಯ ಶೀರ್ಷಿಕೆಯಲ್ಲಿಯೇ ಸೂಚಿತವಾಗಿರುವಂತೆ, ಶ್ರೀಶಂಕರಾಚಾರ್ಯರಿಂದ ಆರಂಭಗೊಂಡ ಗುರುಪರಂಪರೆ ಇಂದಿನ ವರೆಗೆ ಅವಿಚ್ಛಿನ್ನವಾಗಿ ಬೆಳೆದು ಬಂದ ಬಗೆಯನ್ನು ಮೊದಲನೆಯ ಭಾಗದಲ್ಲೂ, ಶೃಂಗೇರಿಯ ಸ್ಥಳ ಮಾಹಾತ್ಮ್ಯ, ಅಲ್ಲಿನ ಪರಂಪರೆ, ಕಾರ್ಯಚಟುವಟಿಕೆಗಳು — ಇವೇ ಮೊದಲಾದ ಅಂಶಗಳನ್ನು ಎರಡನೇ ಭಾಗದಲ್ಲೂ ವಿಸ್ತಾರವಾಗಿ ನಿರೂಪಿಸಲಾಗಿದೆ. ಶೃಂಗೇರಿ ಪೀಠವನ್ನು ಕುರಿತು ಸಮಗ್ರವಾಗಿ ತಿಳಿಯಬಯಸುವ ಓದುಗರಿಗೆ ಈ ಕೃತಿಯು ಎಲ್ಲ ಮಾಹಿತಿಗಳನ್ನೂ ನೀಡುತ್ತದೆ; ಭಾರತೀಯ ಆಧ್ಯಾತ್ಮಿಕ ಪರಂಪರೆಯಲ್ಲಿ ಶೃಂಗೇರಿಗೆ ಎಂತಹ ಮಹತ್ವವಿದೆ ಎಂಬುದನ್ನೂ ಈ ಕೃತಿಯು ಮನದಟ್ಟು ಮಾಡಿಕೊಡುತ್ತದೆ.

ಮೊದಲ ಭಾಗದಲ್ಲಿ ಶೃಂಗೇರಿಯ ಪ್ರಾಕೃತಿಕ ಹಿನ್ನೆಲೆ, ಅದ್ವೈತ ಪ್ರತಿಪಾದಕ ಶ್ರೀಶಂಕರರು, ಅವಿಚ್ಛಿನ್ನ ಗುರುಪರಂಪರೆ, ಶಂಕರರ ಪ್ರಧಾನ ಶಿಷ್ಯರು, ಅನಂತರ ಶೃಂಗೇರಿ ಪೀಠದ ಗುರುಗಳಾದ ಎಲ್ಲ ಜಗದ್ಗುರುಗಳ ಸಂಕ್ಷಿಪ್ತ ಜೀವನ ಚರಿತ್ರೆ — ಇವಿಷ್ಟು ಬರುತ್ತವೆ. ಈಗಿನ ಜಗದ್ಗುರುಗಳಾದ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳ ವರೆಗೂ ಒಟ್ಟು 'ಮೂವತ್ತೇಳು ಜಗದ್ಗುರುಗಳ ವಿಷಯವನ್ನು ತಿಳಿಸುವ' ಮೊದಲ ಕೃತಿ ಎಂದು ಮುನ್ನುಡಿಯಲ್ಲಿ ನ್ಯಾಯಮೂರ್ತಿ ರಾಮಾಜೋಯಿಸ್ ಅವರು ಬರೆದಿದ್ದಾರೆ.




ಎರಡನೆಯ ಭಾಗದಲ್ಲಿ ಶೃಂಗೇರಿ ಕ್ಷೇತ್ರ ಮಹಿಮೆ, ಇಲ್ಲಿನ ದೇವಾಲಯಗಳು, ಇವುಗಳಲ್ಲಿ ನಡೆಯುವ ಪೂಜೆ, ಉತ್ಸವಾದಿಗಳು, ಶ್ರೀಮಠದ ಶಿಷ್ಯಸ್ವೀಕಾರವೇ ಮುಂತಾದ ಪರಂಪರೆ, ಮಹಾಸ್ವಾಮಿಗಳ ವಿಜಯಯಾತ್ರೆಯ ವಿವರಗಳು, ಇಲ್ಲಿನ ಸಂಸ್ಕೃತ ಪಾಠಶಾಲೆ, ಮಠದ ಧಾರ್ಮಿಕ-ಸಾಂಸ್ಕೃತಿಕ ಸೇವೆ, ಕಾಶ್ಮೀರದ ಸರ್ವಜ್ಞಪೀಠದ ವಿಶೇಷತೆ, ಕಾಶ್ಮೀರ-ಶೃಂಗೇರಿ ಸಂಬಂಧ, ಮಠದಲ್ಲಿನ ಆಚರಣೆಗಳು, ಶೃಂಗೇರಿ ಪೀಠದ ಶಾಖಾ ಮಠಗಳ ವಿವರ, ಕೆಲವು ಸ್ತೋತ್ರಗಳು — ಇಂತಹ ಲೇಖನಗಳಿವೆ. ಮಹತ್ವಪೂರ್ಣವಾದ ಮಾಹಿತಿಗಳು, ಚಿತ್ರಗಳು ಹಾಗೂ ಐತಿಹಾಸಿಕ ವಿವರಗಳಿಂದ ಇಡಿಕಿರಿದ ಈ ಎರಡನೆಯ ಭಾಗವು ಆಸಕ್ತರಿಗೆ ಹೆಚ್ಚು ಉಪಯುಕ್ತವಾಗಿದೆ.

**ಕೃತಿ:** ಶೃಂಗೇರಿ ಶಾರದಾಪೀಠ ಗುರುಪರಂಪರೆ ಮತ್ತು ಸ್ಥಳ ಮಹತ್ವ
**ಲೇಖಕರು :** ಪ್ರಕಾಶ್‌ಬಾಬು ಕೆ.ಆರ್. ಮಂಡಗದ್ದೆ
**ಪ್ರಕಾಶನ :** ಲೋಕ ಶಿಕ್ಷಣ ಟ್ರಸ್ಟ್ ಬೆಂಗಳೂರು - ಹುಬ್ಬಳ್ಳಿ
**ಪುಟ:** 244 **ಬೆಲೆ :** 220

ಇಲ್ಲಿನ ಲೇಖನಗಳ ಮಧ್ಯೆ ಬರುವ ಕೆಲವು ವಿಷಯಗಳು ಕುತೂಹಲಕಾರಿಯೂ, ಹಲವು ಬಾರಿ ಉಪಯುಕ್ತ ಮಾಹಿತಿಗಳನ್ನೊಳಗೊಂಡೂ ಇರುತ್ತವೆ. ಉದಾ: 'ಗುರುಕೃಪೆ -ಗುರುಪಾದುಕಾ ಮಹತ್ವ' ಎಂಬ ಅಧ್ಯಾಯದಲ್ಲಿ (ಪು.೧೩೧) ಹೀಗೆ ಬರುತ್ತದೆ - ''ಪಾದುಕೆ ಎಂದರೆ ಪಾದದಾಕಾರದಲ್ಲಿ ಮರದಿಂದಲೇ ತಯಾರಿಸಿರುವರು. ಅದನ್ನು ಮಹಾತ್ಮರುಗಳು, ಜಗದ್ಗುರುಗಳು ಅಥವಾ ತಮ್ಮ ತಮ್ಮ ಗುರುಗಳು, ತಲತಲಾಂತರದ ಸಂಪ್ರದಾಯದಿಂದ ಬಂದಿರುವಂತೆ ಮಾಡಿಸುವ ಪಾದುಕೆಗಳು. ಇವು ಹಾಗೆ ಮರದಲ್ಲಿ ಮಾಡಿ ದಂತೆಯೇ ಇಟ್ಟುಕೊಳ್ಳಬಹುದು ಅಥವಾ ಹಿತ್ತಾಳೆ, ಪಂಚಲೋಹ, ಬೆಳ್ಳಿ, ಚಿನ್ನ - ಇತ್ಯಾದಿ ಲೋಹಗಳಿಂದ ಆ ಪಾದುಕೆಗಳಿಗೆ ಕವಚವನ್ನು (ಶಂಖ, ಚಕ್ರ, ಗದಾ, ಪದ್ಮ ಇತ್ಯಾದಿ ಅದರಲ್ಲಿ ಕೆತ್ತಿಸಿ) ಮಾಡಿಸಿ ಅಂತಹ ಪಾದುಕೆಗಳನ್ನು ಗುರುಗಳಾದವರು ಒಂದು ಬಾರಿಯೋ, ಹಲವು ಬಾರಿಯೋ ಮೆಟ್ಟಿ ಅದರ ಮೇಲೆ ನಿಂತು ಆಶೀರ್ವದಿಸಿ ತಮ್ಮ ತಪಃಶಕ್ತಿಯನ್ನು ಅದರಲ್ಲಿ ಸೇರಿಸಿ ಶಿಷ್ಯ ಭಕ್ತ ಜನರೋದ್ಧಾರಕ್ಕಾಗಿ ನೀಡುತ್ತಾರೆ.''

ಮೂಲತಃ ಶೃಂಗೇರಿಯವರೇ ಆದ ಲೇಖಕರು ತಮ್ಮ ಸ್ವಭಾವ ಸಹಜ ಶ್ರದ್ಧಾಭಕ್ತಿ ಗಳಿಂದ ಈ ಗ್ರಂಥವನ್ನು ರಚಿಸಿದ್ದಾರೆ. ಒಂದು ಮಹಾನ್ ಪರಂಪರೆಯ ಬಗ್ಗೆ ಬರೆಯುವಾಗ ಎಷ್ಟೆಲ್ಲ ಶ್ರಮ, ಅಚ್ಚುಕಟ್ಟುತನ ಹಾಗೂ ನಿಖರತೆಗಳನ್ನೂ ಹೊಂದಿರುವ ಅಗತ್ಯವಿದೆಯೋ ಅವೆಲ್ಲವನ್ನೂ ಲೇಖಕರು ಇಲ್ಲಿ ವಿನಿಯೋಗಿಸಿದ್ದಾರೆ. ಶೃಂಗೇರಿ ಪೀಠವನ್ನು ಕುರಿತು ಅರಿಯುವ ಆಸಕ್ತರಿಗೂ, ಅಲ್ಲಿನ ಹತ್ತುಹಲವು ಮಾಹಿತಿಗಳನ್ನು ತಿಳಿಯಬಯಸುವವರಿಗೂ ಉಪಯುಕ್ತವಾದ ಈ ಕೃತಿ ಸಂಗ್ರಹಯೋಗ್ಯವಾಗಿದೆ.